# ಸ್ಪೆಷಲ್ ಕೇಸ್ ನಂಬರ್ಃ     ಎಸ್ ಸಿ     ನಂಬರ್ಃ

**ಚಾ.ಸಾ.–1        ಪ್ರಾ.ಸಾ.–1**

**ದಿನಾಂಕಃ 14–08–2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಪಾಟೀಸವಾಲು  ಆರೋಪಿತರ ಪರ ಶ್ರೀ ಹಚ್ ಬಿ ಪಿ   ವಕೀಲರಿಂದ**

1.   ಘಟನಾ ಜಾಗಕ್ಕೆ ಸಂಬಂಧಿಸಿದಂತೆ  ಓ ಎಸ್ ನಂಬರ್ 14/2020 ರಂತೆ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ . ಅದನ್ನು ನನ್ನ ಪತ್ನಿ  ಹಾಕಿರುತ್ತಾರೆ. ನಾನು ಅಧಿಕಾರ ಪತ್ರ ಪಡೆದುಕೊಂಡು ಪ್ರಕರಣ ನಡೆಸುತ್ತಿದ್ದೇನೆ.  ನಾವು ತಾತ್ಕಲಿಕ ನಿರ್ಬಂಧಕಾಜ್ಞೆ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ . ನಮಗೆ ಸದರಿ ಆದೇಶ ದೊರೆತಿಲ್ಲ ಎಂದರೆ ಸರಿ . ನನ್ನ ಪತ್ನಿ 2018 ರಲ್ಲಿ ಎ ಸಿ ಯವರ ಮುಂದೆ ಆರ್ ಮಿಸ್ 373/2018 ರಂತೆ ಕೂಡಾ ಒಂದು ಪ್ರಕರಣ ದಾಖಲು ಮಾಡಿದ್ದೆವು ಎಂದರೆ ಸರಿ .  ಸದರಿ ಅರ್ಜಿ ದಿನಾಂಕ 07–02–2024 ರಂದು ವಜಾ ಆಗಿರುತ್ತದೆ ಎಂದರೆ ಸರಿ . ಸಾಕ್ಷಿ ಸಿವಿಲ್ ದಾವೆ ಚಾಲ್ತಿಯಲ್ಲಿರುವುದರಿಂದ ವಜಾ ಮಾಡಿರುತ್ತಾರೆ ಎನ್ನುತ್ತಾರೆ.

2.  ತಕರಾರು ಜಾಗದಲ್ಲಿ ನಾನೇ ಬೋರ್ಡ್ ಹಾಕಿದ್ದೆ . ನಾನು ದಿನಾಂಕ 20–12–2024 ರಂದು ಸದರಿ ಬೋರ್ಡ್ ಹಾಕಿದ್ದೆ. ಬೋರ್ಡ್ ಹಾಕಲುನ್ಯಾಯಾಲಯದಿಂದ ಅಥವಾ ಬೇರೆ ಯಾವುದೇ ಪ್ರಾಧಿಕಾರದಿಂದ ಆದೇಶ ಆಗಿರುವುದಿಲ್ಲ ಸಾಕ್ಷಿ ನಮ್ಮ ವಕೀಲರು ಹಾಕಲು ಹೇಳಿದ್ದಾರೆ ಎನ್ನುತ್ತಾರೆ. ಈ ಬಗ್ಗೆ ಆರೋಪಿಗೆ ಅವರ ಮನೆಯವರಿಗೆ ನೋಟೀಸ್ ಕೊಟ್ಟಿಲ್ಲ. ಬೋರ್ಡನ್ನು ಅದೇ ದಿನ ಬರೆಸಿದ್ದೆ . ಮಂಡ್ಯದಲ್ಲಿ ಅದನ್ನು ಬರೆಸಿದ್ದೆ . ಸದರಿ ಬೋರ್ಡನ್ನು ಬರೆದ ವ್ಯಕ್ತಿಯ ಹೆಸರು ಅಥವಾ ಅಂಗಡಿಯ ಹೆಸರು ನನಗೆ ಗೊತ್ತಿಲ್ಲ. ನಾನು ಆ ದಿನ ವೆಂಕಟಯ್ಯ ಎಂಬುವವರನ್ನು ಕೆಲಸಕ್ಕೆ ತೆಗೆದುಕೊಂಡು ಗುಂಡಿ ಅಗೆದು ನೆಟ್ಟಿಸಿಕೊಂಡಿದ್ದೆ .  ಪಕ್ಕದ ಮನೆಯ ಸುಮಾಯಖಾನ್ ಮತ್ತು ಜಯಮ್ಮ ಎಂಬುವವರು ಬೋರ್ಡ್ ನೆಟ್ಟಿದ್ದನ್ನು ನೋಡಿದ್ದಾರೆ . ನಾವು ಆ ಬೋರ್ಡನ್ನು ಮದ್ಯಾಹ್ನ 3 ರಿಂದ 3–30 ಸಮಯದಲಿ ನೆಟ್ಟಿದ್ದೆವು .  ವಿವಾದಿತ ಜಾಗದ ಪಕ್ಕ ಸಾರ್ವಜನಿಕರು ಓಡಾಡುವ ರಸ್ತೆ ಇದೆ ಎಂದರೆ ಸರಿ . ಸದರಿ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ .

ಸುಮಾಯಖಾನ್ ಮತ್ತು ಜಯಮ್ಮರವರು ಆರೋಪಿ ಮತ್ತು ಇತರರ ಮೇಲೆ ಸಿವಿಲ್ ದಾವೆ ಮಾಡಿದ್ದಾರೆ ಎಂದರೆ ಸರಿ . ಅವು ಕೂಡಾ 2018 ನೇ ಇಸವಿಯಿಂದ ನಡೆಯುತ್ತಿರುತ್ತವೆ . ಇವರಿಬ್ಬರನ್ನು ಹೊರತು ಪಡಿಸಿ ಬೇರೆಯವರು ಕೂಡಾ ಇದ್ದಾರೆ ಅವರೆಂದರೆ ಸದಾನಂದ ಮತ್ತು ಅಬ್ದುಲ್ ಖಾನ್ ಆಗಿರುತ್ತಾರೆ. ಈ ವ್ಯಕ್ತಿಗಳನ್ನು ಪೊಲೀಸರಿಗೆ ನಾನು ಹೇಳಿದ್ದೇನೆ.

3. ಬೋರ್ಡ್‌ನ್ನು ಕೀಳಲು 7–8 ಜನ ಬಂದಿದ್ದರು. ಅವರನ್ನು ಎದುರಿಗೆ ಬಂದರೆ ಗುರುತಿಸುತ್ತೇನೆ. ಅವರ ಪರಿಚಯ ನನಗಿಲ್ಲ. ಅವರನ್ನು ಗುರುತಿಸಲು ಪೊಲೀಸರು ಕೇಳಲಿಲ್ಲ ಆದ್ದರಿಂದ ನಾನು ಗುರುತಿಸಿಲ್ಲ . ಬೋರ್ಡ್ ಹಾಕಲು ನಾನು ಸಿಮೆಂಟ್ , ಕಲ್ಲನ್ನು ಉಪಯೋಗಿಸಿದ್ದೆ . ಅದನ್ನು ನಾನು ಪೊಲೀಸರಿಗೆ ತೋರಿಸಿದ್ದೇನೆ. ಬೋರ್ಡ್‌ನ್ನು ಆರೋಪಿ ಕಿತ್ತುಕೊಂಡು ಹೋಗಿದ್ದಾರೆ . ಆಗ ಮದ್ಯಾಹ್ನ 4–30 ಸಮಯ ಆಗಿತ್ತು . ನಾನು ಸದರಿ ಬೋರ್ಡ್‌ನ್ನು ಪೊಲೀಸರಿಗೆ ತೋರಿಸಿಲ್ಲ. ನಾನು ಬೋರ್ಡ್‌ನ್ನು ನೆಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಅದನ್ನು ಕಿತ್ತು ಹಾಕಿಲ್ಲ ಎಂದರೆ ಸರಿಯಲ್ಲ.

4. ಆ ಸಮಯದಲ್ಲಿ ವೀಡಿಯೋ ಮಾಡಿಕೊಳ್ಳಲು ನನ್ನ ಬಳಿ ಮೊಬೈಲ್ ಇತ್ತು ಆದರೆ ನಾನು ವೀಡಿಯೋ ಮಾಡಿಕೊಳ್ಳಲಿಲ್ಲ. ಘಟನಾ ಜಾಗಕ್ಕೆ ಮತ್ತು ಪೊಲೀಸ ಠಾಣೆಗೆ ಸುಮಾರು ಅಂದಾಜು 1 ರಿಂದ ಒಂದೂವರೆ ಕಿಲೋಮೀಟರ ಅಂತರ ಇದೆ . ನಾನು ಡಿ ಸಿ ಕಚೇರಿ ಪಕ್ಕದಲ್ಲೆ ದೂರನ್ನು ತಯಾರಿಸಿರುತ್ತೇನೆ. ನಾನು ಘಟನಾ ಜಾಗದಿಂದ ಡಿ ಸಿ ಕಚೇರಿಗೆ ಬಂದಾಗ 5 ರಿಂದ 5–30 ಗಂಟೆಯಾಗಿತ್ತು. ದೂರನ್ನು ತಯಾರಿ ಮಾಡಿಕೊಂಡು ಮಂಡ್ಯ ಪೂರ್ವ ಪೊಲೀಸ್ ಠಾಣೆಗೆ ಹೋಗಿದ್ದೆ . ಆಗ 6 ರಿಂದ 6–30 ಗಂಟೆಯಾಗಿತ್ತು . ನಾನು ಅದೇ ದಿನ ಪೊಲೀಸರನ್ನು ಕರೆದುಕೊಂಡು ಹೋಗಿ ಸ್ಥಳ ತೋರಿಸಿದ್ದೇನೆ. ಆ ದಿನ ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿಲ್ಲ. ಭಾವಚಿತ್ರಗಳಲ್ಲಿ ಅಬ್ದುಲ್ ಖಾನ್ ರವರ ಮನೆ ಇದೆ ಮತ್ತೊಂದು ಕಡೆ ಶಿವರಾಮುರವರ ಮನೆ ಯಾಗಿರುತ್ತದೆ. ಅಕ್ಕಪಕ್ಕದವರನ್ನು ಪೊಲೀಸರು ಕರೆಯಿಸಿದ್ದರು. ಭಾವಚಿತ್ರದಲ್ಲಿ ಅಬ್ದುಲ್ ಖಾನ್ ಕಂಡು ಬಂದಿರುತ್ತಾರೆ. ಸಾಕ್ಷಿ ಎಡಗಡೆಯಿಂದ ಮೊದಲನೆಯವರನ್ನು ಅಬ್ದುಲ್ ಖಾನ್ ಎಂದು ಗುರುತಿಸಿರುತ್ತಾರೆ. ಅವರ ಸೈಟಿಗೆ ಸಂಬಂಧಿಸಿದಂತೆ ವ್ಯಾಜ್ಯ ನಡೆಯುತ್ತಿದೆ

ಎಂದರೆ ಸರಿ . ಆರೋಪಿ ನನ್ನ ಜಾತಿ ಹೆಸರಿಸಿ ಬೈದಿಲ್ಲವೆಂದರೆ ಸರಿಯಲ್ಲ. ನನ್ನ ಮತ್ತು ಅರೋಪಿತರ ನಡುವೆ ಸಿವಿಲ್ ಪ್ರಕರಣ ಬಾಕಿ ಇರುವ ಕಾರಣ ಅವರ ವಿರುದ್ಧ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಜಾತಿ ನಿಂದನೆ ಮಾಡಿಲ್ಲ ಹಾಗೂ ನಾನು ಹೇಳಿದಂತೆ ಪದಗಳನ್ನು ಉಪಯೋಗಿಸಿಲ್ಲವೆಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ